ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

6

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 15\12\20

# ಉಪ ಸಭಾಪತಿ ಮೇಲೆ ಹಲ್ಲೆ ಮಾಡಿದವರ ವಿರುದ್ಧ ದೂರು

15-12-20

**ಬೆಂಗಳೂರು:** ವಿಧಾನ ಪರಿಷತ್ತಿನಲ್ಲಿ ಉಪ ಸಭಾಪತಿ ಧರ್ಮೇಗೌಡರ ಮೇಲೆ ಹಲ್ಲೆ ಮಾಡಿರುವ ಕಾಂಗ್ರೆಸ್ ಸದಸ್ಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಸಭಾಪತಿಗೆ ದೂರು ಸಲ್ಲಿಸಿದ್ದಾರೆ. ಸಾಂವಿಧಾನಿಕ ಹುದ್ದೆಯಲ್ಲಿರುವ ಉಪ ಸಭಾಪತಿಯನ್ನು ಕಾಂಗ್ರೆಸ್ ಸಚೇತಕರಾದ ನಾರಾಯಣಸ್ವಾಮಿ ಹಾಗೂ ಸದಸ್ಯರಾದ ನಸೀರ್ ಅಹಮದ್, ಪ್ರಕಾಶ್ ರಾತೋಡ್ ಮುಂತಾದವರು ಹಲ್ಲೆ ನಡೆಸಿ ಕೊರಳ ಪಟ್ಟಿ ಹಿಡಿದು ಎಳೆದೊಯ್ದರು. ಅಲ್ಲದೇ ಸದನದ ನಿಯಮಗಳನ್ನು ಗಾಳಿಗೆ ತೂರಿ ಅಮಾನವೀಯವಾಗಿ ವರ್ತಿಸಿರುವುದು ಅಕ್ಷಮ್ಯ ಅಪರಾಧವಾಗಿದೆ.

ಕಾಂಗ್ರೆಸ್ ಸದಸ್ಯರಾದ ನಾರಾಯಣಸ್ವಾಮಿ, ಚಂದ್ರಶೇಖರ ಪಾಟೀಲ್ ಮತ್ತು ಶ್ರೀನಿವಾಸ ಮಾನೆ, ಸಭಾಪತಿ ಪೀಠದ ಮೇಲೆ ಕುಳಿತು ದುಂಡಾವರ್ತನೆ ತೋರಿದ್ದಾರೆ. ಈ ಎರಡು ಘಟನೆಗಳು ಸದನದ ಘನತೆ, ಗೌರವ, ಸತ್ಸಂಪ್ರದಾಯಗಳಿಗೆ ಧಕ್ಕೆಯುಂಟು ಮಾಡಿವೆ. ಹೀಗಾಗಿ ಸದನದಲ್ಲಿ ಅಶಿಸ್ತು ತೋರಿರುವ ಸದಸ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಇಷ್ಟೆಲ್ಲಾ ಘಟನೆಗಳು ನಡೆಯಲು ಸಭಾಪತಿ ಯಾಗಿ ಕೆ. ಪ್ರತಾಪಚಂದ್ರ ಶೆಟ್ಟಿ ನಿಯಮಾವಳಿ ಪ್ರಕಾರ ಸದನ ನಡೆಸದಿರುವುದು ಕಾರಣ ಎಂದು ಅವರ ವಿರುದ್ಧವೂ ಆರೋಪ ಮಾಡಿದ್ದಾರೆ. ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸದೆ ಕಚೇರಿಗೆ ತೆರಳಿ ಅಲ್ಲಿ ಕಡತದಲ್ಲಿ ದಾಖಲಿಸಿರುವುದು ಹೀನಕೃತ್ಯ. ಕುರ್ಚಿಗಾಗಿ ಇಷ್ಟೊಂದು ಅಪ್ರಾಮಾಣಿಕ ರಾಗುವ ಅವಶ್ಯಕತೆ ಇತ್ತೇ? ಆತ್ಮಾವಲೋಕನ ಮಾಡಿಕೊಳ್ಳಿ, ಇಂತ ಕರಾಳ ದಿನಕ್ಕೆ ಕಾರಣರಾಗಿರುವ ತಾವು ಇನ್ನಾದರೂ ರಾಜೀನಾಮೆ ಸಲ್ಲಿಸಿ ಎಂದು ಆಗ್ರಹಿಸಿದ್ದಾರೆ.